**ಓ ಎಸ್ ನಂ. 655/2014**

**ಡಿ. ಡಬ್ಲ್ಯೂ ಃ 1**

**ದಿಃ 16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀಆರ್ ಬಿ ಆರ್ ವಕೀಲರಿಂದ ಃ**

ನಾನು ಏಳನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿದ್ದೇನೆ. ಹನಪ್ಪ ನವರಿಗೆ 4 ಮಕ್ಕಳೆಂದರೆ ಸರಿ. ನಿಂಗಯ್ಯ, ಬೆಂಗಳೂರಯ್ಯ, ಕೆಂಪಯ್ಯ ಮತ್ತು ಕರಿಯಪ್ಪ ಎಂಬುವವರು ಅವರ ಮಕ್ಕಳೆಂದರೆ ಸರಿ. ನಿಂಗಯ್ಯ, ಬೆಂಗಳೂರಯ್ಯ, ಕೆಂಪಯ್ಯ ರವರು ಸೇರಿಕೊಂಡು ಶ್ರೀರಾಮಯ್ಯ, ಮಲ್ಲಯ್ಯ, ಬಸವನರಸಯ್ಯ ರವರ ಜೊತೆ ಸೇರಿಕೊಂಡು 75 ಎಕರೆ ಜಮೀನನ್ನು ಸ.ನಂ. 152 ರ ತಾವರೇಕೆರೆ ಗ್ರಾಮದಲ್ಲಿ ದಿನಾಂಕ ಃ 25.07.1927 ರ ಕ್ರಯಪತ್ರದಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಬಾಯಿಮಾತಿನ ಮೂಲಕ 1975 ರಲ್ಲಿ ಮೇಲೆ ಹೇಳಿದ ವ್ಯಕ್ತಿಗಳು ವಿಭಾಗ ಮಾಡಿಕೊಂಡಾಗ ಸದರಿ ಜಮೀನಿನಲ್ಲಿ ತಲಾ 10 ಎಕರೆ 28.5 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿ 10 ಎಕರೆ 7 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿಯೊಬ್ಬರಿಗೂ 10 ಎಕರೆ 28.5 ಗುಂಟೆ ಜಮೀನು ಬಂದಿರುತ್ತದೆ, ನಾನು 10 ಎಕರೆ 7 ಗುಂಟೆ ಜಮೀನು ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

ಕೆಂಪಯ್ಯ ನವರಿಗೆ ಮಕ್ಕಳು ಇಲ್ಲದೆ ಇದ್ದ ಕಾರಣ ಅವರು ತೀರಿಕೊಂಡ ನಂತರ ಬೆಂಗಳೂರಯ್ಯ ನವರಿಗೆ ಕೆಂಪಯ್ಯ ನವರಿಗೆ ಬಂದ ಜಮೀನು ಬಂದಿರುತ್ತದೆ ಎಂದರೆ ಸರಿ. ದಾವಾ ಎ ಷೆಡ್ಯೂಲ್ ಜಮೀನು ಬೆಂಗಳೂರಯ್ಯ ನವರಿಗೆ ಮೇಲೆ ಹೇಳಿದ ರೀತಿಯಲ್ಲಿ ಬಂದಿರುವಂತಹ ಜಮೀನು ಎಂದರೆ ಸರಿ. ದಾವಾ ಬಿ ಷೆಡ್ಯೂಲ್ ಜಮೀನು ಬೆಂಗಳೂರಯ್ಯ ನವರಿಗೆ ಮಾಲೀಕತ್ವ ಮತ್ತು ವಾರಸುದಾರಿಕೆಯಿಂದ ಬಂದಿರುವಂತಹ ಜಮೀನು ಎಂದರೆ ಸರಿ. ಬೆಂಗಳೂರಯ್ಯ ನವರಿಗೆ ಇಬ್ಬರು ಮಕ್ಕಳೆಂದರೆ ಅವರೆಂದರೆ ಅಕ್ಕದೇವಮ್ಮ ಮತ್ತು ಲಿಂಗಪ್ಪ ಎಂದರೆ ಸರಿ. ನಮ್ಮ ತಂದೆ ಯಾವ ವರ್ಷ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ, ನನಗೆ ಆಗ ಸುಮಾರು 4 ವರ್ಷ ವಯಸ್ಸಾಗಿರುತ್ತದೆ.

ಪ್ರತಿವಾದ ಪತ್ರವನ್ನು ಸಲ್ಲಿಸುವಾಗ ನಮ್ಮ ವಕೀಲರಿಗೆ ನಾನು ಪೂರ್ಣ ಮಾಹಿತಿಯನ್ನು ನೀಡಿರುತ್ತೇನೆ. ವಾದಿ ಅಕ್ಕದೇವಮ್ಮ ನವರು ಓ ಎಸ್ 217/2010 ದಾವೆಯನ್ನು ಭಾಗ ಕೇಳಿ ಹೂಡಿದ್ದರು ಎಂದರೆ ಸರಿ. ಆ ದಾವೆಯಲ್ಲಿ ನಾವೆಲ್ಲರೂ ಲಿಖಿತ ಹೇಳಿಕೆಯನ್ನು ಹಾಕಿರುತ್ತೇವೆ ಎಂದರೆ ಸರಿ.

ಸದರಿ ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ಹೂಡಲು ನಾನೇ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೆ. **ಸಾಕ್ಷಿಗೆ ಈಗ ಸದರಿ ಲಿಖಿತ ಹೇಳಿಕೆಯ ಜೆರಾಕ್ಸ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಜೆರಾಕ್ಸ ಪ್ರತಿಯನ್ನು ನೋಡಿ ತಾನೇ ಲಿಖಿತ ಹೇಳಿಕೆಯನ್ನು ನ್ಯಾಯಾಲಯದಲ್ಲಿ ಓ ಎಸ್ 217/2010 ರಲ್ಲಿ ಹಾಕಿರುವುದಾಗಿ ಗುರುತಿಸಿದ್ದು ಅದನ್ನು ಈಗ ನಿ ಪಿ 36 ಎಂದು ಗುರುತಿಸಲಾಯಿತು. (ಸದರಿ ದಾಖಲಾತಿಯನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದು, ಅದನ್ನು ತಕರಾರಿನ ಮೇರೆಗೆ ಗುರುತಿಸಲಾಗಿದೆ) ನಿ ಪಿ 36 ರಲ್ಲಿ ನಾನು ದಿನಾಂಕ : 26.02.1986 ರಂದು ಮತ್ತು 21.04.1993 ರಲ್ಲಿ ಎರಡು ಬಾರಿ ನಮ್ಮ ಕುಟುಂಬದ ಪಂಚಾಯಿತಿ ಪಾರಿಕತ್ ಆಗಿರುತ್ತದೆ ಎಂದು ನಾನು ಹೇಳಿರುತ್ತೇನೆ ಎಂದರೆ ಸರಿ.**

ನಮ್ಮ ತಾತ ಬೆಂಗಳೂರಯ್ಯ ನವರು 1994 ರಲ್ಲಿ ತೀರಿಕೊಂಡಿರುತ್ತಾರೆ. ನಿ ಡಿ 86 ರಲ್ಲಿ ಬೆಂಗಳೂರಯ್ಯ ನವರಿಗೆ ಯಾವುದೆ ಆಸ್ತಿಗಳು ಭಾಗಕ್ಕೆ ಕೊಡಲಾಗಿರುವುದಿಲ್ಲ ಎಂದರೆ ಸರಿ. ನಿ ಡಿ 86 ರಲ್ಲಿ ಬೆಂಗಳೂರಯ್ಯ ನವರು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಾತ ಬೆಂಗಳೂರಯ್ಯನವರೇ ನಿ ಡಿ 86 ನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಅಥವಾ ಪ್ರತಿವಾದಪತ್ರದಲ್ಲಾಗಲಿ ನನ್ನ ತಾತ ಬೆಂಗಳೂಯ್ಯನವರು ನಿ ಡಿ 86 ಮಾಡಿಕೊಟ್ಟಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ.

ನಾನು ಡಿ ಡಬ್ಲ್ಯೂ 2 ಮತ್ತು 3 ರವರನ್ನು ವಿಭಾಗ ಆಗಿರುವುದನ್ನು ತೋರಿಸಲು ಸಾಕ್ಷಿ ಮಾಡಿಸಿರುತ್ತೇನೆ. ನಾನೇ ಡಿ ಡಬ್ಲ್ಯೂ 2 ಮತ್ತು 3 ರವರನ್ನು ನ್ಯಾಯಾಲಯಕ್ಕೆ ಸಾಕ್ಷ್ಯ ಹೇಳಲು ಕರೆದುಕೊಂಡು ಬಂದು ಪ್ರಮಾಣಪತ್ರವನ್ನು ಅವರ ಕೈಯಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಡಿ ಡಬ್ಲ್ಯೂ 2 ಮತ್ತು 3 ರವರನ್ನು ನಮ್ಮ ವಕೀಲರ ಬಳಿ ಕರೆದುಕೊಂಡು ಹೋಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಮಾಡಿಸಿದ್ದೇನೆ ಎಂದರೆ ಸಾಕ್ಷಿ ನಾನು ನಮ್ಮ ವಕೀಲರ ಹತ್ತಿರ ಅವರನ್ನು ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

**ನಿ ಡಿ 86 ನ್ನು ಮಾಡಿಸುವ ಮೊದಲು ನಾನು, ತಿಮ್ಮಯ್ಯ, ರೇವಣ್ಣ, ಲಿಂಗಪ್ಪ, ಬೆಂಗಳೂರಯ್ಯ, ಮಹಾದೇವಯ್ಯ, ಮುನಿತಾಯಮ್ಮ, ಕೆಂಪಯ್ಯ, ರವಿ, ದೇವಯ್ಯ ಮತ್ತು ನಾಗೇಂದ್ರಪ್ಪ ರವರು ಮನೆಯ ಹತ್ತಿರ ಪಂಚಾಯಿತಿ ಮಾಡಿಸಿ ಅಲ್ಲಿ ಭಾಗಗಳನ್ನು ಹಂಚಿಕೊಂಡು ನಂತರ ನಮ್ಮ ವಕೀಲರಿಗೆ ನಾವು ಮಾಡಿಕೊಂಡಿರುವ ಪತ್ರವನ್ನು ಕೊಟ್ಟಿರುತ್ತೇವೆ. ನಂತರ ವಕೀಲರು ನಿ ಡಿ 86 ನ್ನು ಮಾಡಿಕೊಂಡು ನಮಗೆ ನೀಡಿರುತ್ತಾರೆ. ನಿ ಡಿ 86 ನ್ನು ವಕೀಲರು ತಯಾರು ಮಾಡಿದ ನಂತರ**

**ಅದರಲ್ಲಿ ಇರುವ ಸಹಿಗಳನ್ನು ನಾವು ಮಾಡಿರುತ್ತೇವೆ. ಮೇಲೆ ಹೇಳಿರುವ ಬೆಂಗಳೂರಯ್ಯ ನವರು ನಮ್ಮ ತಾತ. ನಿ ಡಿ 86 ರಲ್ಲಿ ಅಕ್ಕದೇವಮ್ಮ ಮತ್ತು ಅವರ ಮಕ್ಕಳು ಪಕ್ಷಗಾರರಲ್ಲ ಎಂದರೆ ಸರಿ. ಅವರಿಗೆ ನಾವು  ಮೊದಲೇ ಭಾಗವನ್ನು ನೀಡಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ.**

ವಜ್ರಪ್ಪ ನಮ್ಮ ಮಾವ ಶಿವಲಿಂಗಯ್ಯ ಎಂಬುವವರಿಗೆ ಸ.ನಂ. 152 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಮಾರಿರುತ್ತಾರೆ ಎಂದರೆ ಸಾಕ್ಷಿ ನಾನೇ ವಜ್ರಪ್ಪ ನವರಿಗೆ ಜಮೀನನ್ನು ಮಾರಿರುತ್ತೇನೆ ಎಂದು ನುಡಿಯುತ್ತಾರೆ. ವಜ್ರಪ್ಪ ನವರಿಗೆ 1986 ರ ವಿಭಾಗಪತ್ರದ ಬಗ್ಗೆ ಗೊತ್ತಿರುತ್ತದೆಯೋ ಎಂದರೆ ಸಾಕ್ಷಿ ಅವರಿಗೆ ಗೊತ್ತಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ.

**ನಿ ಪಿ 22 ರ 2 ನೆ ಪುಟದಲ್ಲಿ ' ನಂತರ ...............ಮಾಡಿಸಿಕೊಂಡಿರುತ್ತಾರೆ' ಎಂದು ಹೇಳಿರುವ ವಿಚಾರ ಸರಿಯಾಗಿರುತ್ತದೆ.  ಸಾಕ್ಷಿ ಸರಿ ಎಂದು ಒಪ್ಪಿಕೊಂಡಿರುವ ವಿಚಾರವನ್ನು ನಿ ಪಿ 22 ಎ ಎಂದು ಗುರುತಿಸಲಾಯಿತು.  ಅದೇ ರೀತಿ ನಿ ಪಿ  23 ರಲ್ಲೂ ಕೂಡ ' ನಂತರ ................... ಮಾಡಿಸಿಕೊಂಡಿರುತ್ತಾರೆ ' ಎಂದು ಹೇಳಿರುವ ವಿಚಾರ ಸರಿಯಾಗಿರುತ್ತದೆ. ಸಾಕ್ಷಿ ಸರಿ ಎಂದು ಒಪ್ಪಿಕೊಂಡಿರುವ ವಿಚಾರವನ್ನು ನಿ ಪಿ 23 ಎ ಎಂದು ಗುರುತಿಸಲಾಯಿತು.**

ನಾನು ಬೆಂಗಳೂರಯ್ಯ ನವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಾನು ಹತ್ತಿರ ಬೆಂಗಳೂರಯ್ಯ ನವರ ಮರಣ ಪ್ರಮಾಣಪತ್ರ ಇರುವುದಿಲ್ಲ. ಸ.ನಂ 22 ಹೊಸ ಸ.ನಂ.  62 ರ ಒಟ್ಟು ವಿಸ್ತೀರ್ಣ 2 ಎಕರೆ  ಬೆಂಗಳೂರಯ್ಯ ನವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ.  3 ಗುಂಟೆ ಜಮೀನನ್ನು ಬೆಂಗಳೂರಯ್ಯ ನವರು ವಾದಿ ಅಕ್ಕದೇವಮ್ಮ ನವರಿಗೆ ಸ.ನಂ. 46 ರಲ್ಲಿ ಕೊಟ್ಟಿರುತ್ತಾರೆ ಎಂದು ಹೇಳಿದ್ದು ಅದರ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಕೊಡುತ್ತೇನೆ ಎಂದು ನುಡಿಯುತ್ತಾರೆ.  ನಾನು ನ್ಯಾಯಾಲಯಕ್ಕೆ ಎಂ ಆರ್ ನಂಬರ್  33/1997-98 ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ, ಅದನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನನ್ನ ಹೆಸರಿಗೆ ಎಲ್ಲ ದಾಖಲಾತಿಗಳ ಖಾತೆ 2006-07 ರ ನಂತರ ಆಗಿರುತ್ತದೆ ಎಂದು ಸರಿ. ನಿ ಡಿ  86 ನ್ನು ವಾದಿಗೆ ಆಸ್ತಿ ಕೊಡಬಾರದು ಎಂಬ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು.  ನಾನು ದಾಖಲಾತಿಯನ್ನು ಸೃಷ್ಟಿ ಮಾಡಿರುವ ಕಾರಣ ನನ್ನ ದಾಖಲೆಗಳಲ್ಲಿ ವ್ಯತಿರಿಕ್ತತೆ ಇರುತ್ತದೆ ಎಂದರೆ ಸುಳ್ಳು. ನಾನು ದಾಖಲಾತಿಗಳನ್ನು ಸೃಷ್ಟಿ ಮಾಡಿದ ಕಾರಣ ಪ್ರಸ್ತುತ ದಾವೆ ಮತ್ತು ಓ ಎಸ್  217/2010 ರಲ್ಲಿ

ತೆಗೆದುಕೊಂಡಿರುವ ನಿಲುವುಗಳು ಮತ್ತು ಪ್ರತಿ ರಕ್ಷಣೆ ಬೇರೆ ಬೇರೆಯಾಗಿರುತ್ತದೆ ಎಂದರೆ ಸುಳ್ಳು. ವಿವಾದಿತ ವಿಭಾಗಪತ್ರಗಳಲ್ಲಿ ಮತ್ತು ಪ್ರತಿವಾದಿಗಳು ಮಾರಾಟ ಮಾಡಿರುವ ಪತ್ರಗಳಲ್ಲಿ ವಾದಿ ಮತ್ತು ಅವರ ಮಕ್ಕಳು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಅವರು ಸದರಿ ವಿವಾದಿತ ವಿಭಾಗಪತ್ರಗಳಿಗೆ ಮತ್ತು ಕ್ರಯಪತ್ರಗಳಿಗೆ ಒಪ್ಪಿಗೆ ಕೊಟ್ಟಿರುವುದಿಲ್ಲ ಮತ್ತು ಅದರಲ್ಲಿ ಅವರು ಸಹಿ ಮಾಡಿರುವುದಿಲ್ಲ ಎಂದರೆ ಸರಿ.

ವಾದಿಗೆ ದಾವಾ ಆಸ್ತಿಗಳಲ್ಲಿ ಸಮಾನ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ನಾವು 1962 ರಲ್ಲಿ ಅವರಿಗೆ ಆಸ್ತಿಯ ಭಾಗ ನೀಡಿರುತ್ತೇವೆ ಎಂದು ನುಡಿಯುತ್ತಾರೆ. 1962 ರಲ್ಲಿ ವಿಭಾಗದಲ್ಲಿ ವಾದಿಗೆ ಭಾಗ ಕೊಟ್ಟಿರುವ ವಿಚಾರವನ್ನು ನನ್ನ ಪ್ರತಿವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಡಿ ಡಬ್ಲ್ಯೂ 2 ಮತ್ತು 3 ರವರನ್ನು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿರುವುದಕ್ಕೆ ಪುಷ್ಟೀಕರಣ ನೀಡಲು ಸಾಕ್ಷಿಯಾಗಿ ಮಾಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ಪ್ರತಿವಾದಿ 1 ರಿಂದ 7 ರವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿ 1 ರಿಂದ 7 ರವರು ನಾನು ಅವರ ಪರ ಸಾಕ್ಷ್ಯ ನುಡಿಯಲು ಸಹಮತ ನೀಡಿರುತ್ತಾರಾ ಎಂದರೆ ನೀಡಿರುತ್ತಾರೆ.

ನಿ ಡಿ 86 ರಲ್ಲಿ ಇರುವ ಹೆಬ್ಬೆಟ್ಟಿನ ಗುರುತು ನನ್ನ ತಾತ ಬೆಂಗಳೂರಯ್ಯನವರದ್ದು ಅಲ್ಲ ಎಂದರೆ ಸುಳ್ಳು. ಸಾಕ್ಷಿದಾರರು ಮತ್ತು ನಾನು ಸೇರಿ ನಿ ಡಿ 86 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಕಂದಾಯ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು. ವಾದಿಗಳಿಗೆ ಭಾಗ ಕೊಡಬಾರದೆಂಬ ಉದ್ದೇಶದಿಂದ ನಿ ಡಿ 86 ನ್ನು ಮತ್ತು ಕಂದಾಯ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು, ನಾವು ವಾದಿಗೆ ಏನು ಕೊಡಬೇಕಾಗಿತ್ತೋ ಆ 2 ಎಕರೆ 3 ಗುಂಟೆ ಜಮೀನನ್ನು ಈಗಾಗಲೇ ಅವರಿಗೆ ವಿಭಾಗದಲ್ಲಿ ಕೊಟ್ಟಿರುತ್ತೇವೆ. ಆ ರೀತಿ ವಿಭಾಗದಲ್ಲಿ ನಾನು ಯಾವುದೆ ಅಸ್ತಿಯನ್ನು ಕೊಟ್ಟಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಾನು ಪೂರ್ವನಿಯೋಜಿತವಾಗಿ ವಾದಿಗೆ ಭಾಗ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**

ಓ ಎಸ್ ನಂ. 655/2014

ಡಿ. ಡಬ್ಲ್ಯೂ ಃ 2

ದಿಃ 16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀಆರ್ ಬಿ ಆರ್ ವಕೀಲರಿಂದ ಃ

ನಾನು 9 ನೆ ತರಗತಿಯವರೆವಿಗೂ ಓದಿರುತ್ತೇನೆ. ನಾನು, ದೇವಯ್ಯ ಮತ್ತು ನಾಗೇಂದ್ರ ಒಂದೇ ಊರಿನವರು ಮತ್ತು ಸ್ನೇಹಿತರು ಎಂದರೆ ಸರಿ. ನನ್ನ ಮುಖ್ಯ ಪ್ರಮಾಣಪತ್ರವನ್ನು ನಮ್ಮ ವಕೀಲರು ತಯಾರು ಮಾಡಿರುತ್ತಾರೆ. ಸದರಿ ನನ್ನ ಮುಖ್ಯ ಪ್ರಮಾಣಪತ್ರವನ್ನು ತಯಾರು ಮಾಡುವಾಗ ನಾನು ದ್ಯಾವಯ್ಯ ಮತ್ತು ನಾಗೇಂದ್ರ ರವರು ವಕೀಲರ ಕಚೇರಿಗೆ ಹೋಗಿರುತ್ತೇವೆ. ಸದರಿ ಪ್ರಮಾಣಪತ್ರವನ್ನು ತಯಾರು ಮಾಡುವಾಗ ದ್ಯಾವಯ್ಯ ನವರು ಎಲ್ಲ ಮಾಹಿತಿಗಳನ್ನು ನೀಡುತ್ತಿದ್ದರು ಎಂದರೆ ಸರಿ. ಈ ದಿನವೂ ನ್ಯಾಯಾಲಯಕ್ಕೆ ನಾವು 3 ಜನ ಒಟ್ಟಿಗೆ ಬಂದಿರುತ್ತೇವೆ ಎಂದರೆ ಸರಿ. ಈ ದಿನವೂ ದೇವಯ್ಯ ನವರಿಗೆ ಅನುಕೂಲವಾಗಲಿ ಎಂದು ನಾನು ನ್ಯಾಯಾಲಯಕ್ಕೆ ಸಾಕ್ಷ್ಯ ಹೇಳಲು ಬಂದಿರುತ್ತೇನೆ ಎಂದರೆ ಸರಿ.

ಪಾರಿಕತ್ ನ ಪತ್ರವನ್ನು ಕರೇಕಲ್‌ಪಾಳ್ಯ ದಲ್ಲಿ ತಯಾರು ಆಗಿತ್ತು. ಅದನ್ನು ನಾನು ಅದೇ ಊರಿನಲ್ಲಿ ಸಹಿ ಮಾಡಿರುತ್ತೇನೆ. ಅಲ್ಲಿ ಗ್ರಾಮಸ್ಥರು ಸಹ ನಾನು ಸಹಿ ಮಾಡುವ ಸಮಯದಲ್ಲಿ ಇದ್ದರು. ಅಲ್ಲಿ ಯಾರ್ಯಾರು ಗ್ರಾಮಸ್ಥರು ಇದ್ದರು ಎಂದರೆ ಅವರು ಹೆಸರು ನನಗೆ ಗೊತ್ತಿಲ್ಲ. ನಾನು ಕರೇಕಲ್ ಪಾಳ್ಯದ ಗ್ರಾಮದಲ್ಲಿ ಪತ್ರವನ್ನು ಸಹಿ ಮಾಡಿರುವ ವಿಚಾರವನ್ನು ಮತ್ತು ಆ ಸಮಯದಲ್ಲಿ ಅಲ್ಲಿ ಗ್ರಾಮಸ್ಥರು ಇದ್ದರು ಎಂಬ ವಿಚಾರದ ಬಗ್ಗೆ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆದಿರುತ್ತಾರೆ. ಪಾರಿಕತ್ ಪತ್ರ ಎಲ್ಲಿ ತಯಾರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ, ಆದರೆ ಭಾಗ ಆಗಿರುತ್ತದೆ. ನಾನು ಪತ್ರವನ್ನು ತಯಾರಿ ಮಾಡುತ್ತಿರುವುದನ್ನು ನಾನು ನೋಡಿರುವುದಿಲ್ಲ, ಅದನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಅದನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಾನು ಬನಶಂಕರಿಗೆ ಹೋಗಿರುವುದಿಲ್ಲ. ನಾನು ಬನಶಂಕರಿಗೆ ಹೋಗಿ ಭುಜಂಗ ರವರನ್ನು ಭೇಟಿಯಾಗಿರುವುದಿಲ್ಲ. ನಾಗೇಂದ್ರರವರು ಊರಿನಲ್ಲಿ ಸಹಿ ಮಾಡಿರುತ್ತಾರೆ. ನಾಗೇಂದ್ರ ರವರು ಭುಜಂಗರವನ್ನು ಭೇಟಿ ಅಗಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪತ್ರವನ್ನು ಸಹಿ ಮಾಡಲು ದ್ಯಾವಯ್ಯ ರವರು ನನಗೆ ವಿಭಾಗವಾದ ದಿನ ನೀಡಿರುತ್ತಾರೆ. ದ್ಯಾವಯ್ಯನವರು ನಾಗೇಂದ್ರ

ರವರ ಸಹಿಯನ್ನು ಪತ್ರದಲ್ಲಿ ಮಾಡಿಸಿಕೊಂಡಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದ್ಯಾವಯ್ಯನವರು ಸದರಿ ಪತ್ರಕ್ಕೆ ಎಷ್ಟು ಜನರ ಸಹಿಯನ್ನು ಆ ದಿನ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಆ ದಿನ ದ್ಯಾವಯ್ಯ ನವರು ಎಷ್ಟು ಹೆಬ್ಬೆಟ್ಟಿನ ಗುರುತುಗಳನ್ನು ಸದರಿ ದಾಖಲಾತಿಯಲ್ಲಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ. ನಾನು ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತಯಾರು ಮಾಡುವ ಸಮಯದಲ್ಲಿ ಮೇಲೆ ಹೇಳಿದ ವಿಷಯವನ್ನು ವಕೀಲರಿಗೆ **ಹೇಳಿರುತ್ತೇನೆ.**

ವಿಭಾಗಪತ್ರದಲ್ಲಿ ನನ್ನ ಸಹಿಯನ್ನು ಬಿಟ್ಟರೆ ಉಳಿದವರು ಯಾರು ಯಾರು ಸಹಿ ಮಾಡಿರುತ್ತಾರೆ, ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ವಿಭಾಗಪತ್ರವನ್ನು ನಾನು ನಮ್ಮ ಮನೆಗೆ ತೆಗೆದುಕೊಂಡು ಹೋಗಿರುವುದಿಲ್ಲ. ದ್ಯಾವಯ್ಯ ರವರಿಗೆ ಅನುಕೂಲವಾಗಲಿ ಎಂದು ಮತ್ತು ವಾದಿಗೆ ಭಾಗ ಹೋಗಬಾರದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**

**ಓ ಎಸ್ ನಂ. 655/2014**

**ಡಿ. ಡಬ್ಲ್ಯೂ ಃ 3**

**ದಿಃ 16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಆರ್ ಬಿ ಆರ್ ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು, ರವಿ ಮತ್ತು ದ್ಯಾವಯ್ಯ ಒಂದೇ ಊರಿನವರು ಮತ್ತು ಸ್ನೇಹಿತರಾಗಿರುತ್ತೇವೆ. ಈ ದಿನವೂ ಎಲ್ಲರೂ ನ್ಯಾಯಾಲಯಕ್ಕೆ ಒಟ್ಟಿಗೆ ಬಂದಿರುತ್ತೇವೆ ಎಂದರೆ ಸರಿ. ನಾನು ರವಿ ಮತ್ತು ದ್ಯಾವಯ್ಯ ನವರ ಜೊತೆ ವಕೀಲರ ಕಚೇರಿಗೆ ಹೋಗಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತಯಾರು ಮಾಡಲು ನಾನು ಯಾವುದೆ ಮಾಹಿತಿಯನ್ನು ನೀಡಿರುವುದಿಲ್ಲ ಮತ್ತು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಅದರಲ್ಲಿ ಇರುವುದನ್ನು ಓದಿದರೆ ನನಗೆ ಗೊತ್ತಾಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ.

ಪಂಚಾಯಿತಿ ಪಾರಿಕತ್ ಪತ್ರಕ್ಕೆ ನಾನು ನಮ್ಮ ಊರಿನಲ್ಲಿ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ರವಿ, ರೇವಣ್ಣ , ನಿಂಗಪ್ಪ , ಗುರುಬಸವಯ್ಯ ಮತ್ತು ಇನ್ನು ಕೆಲವು ಹಿರಿಯರು ಇದ್ದರು. ಪಾರಿಕತ್. ಪತ್ರವನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಬನಶಂಕರಿಯ ಭುಜಂಗರವರನ್ನು ನಾನು ಭೇಟಿ ಮಾಡಿರುವುದಿಲ್ಲ. ನನಗೆ ಪಾಲು ಪಾರಿಕತ್ ನ್ನು ಸಹಿ ಮಾಡಲು ದ್ಯಾವಯ್ಯ ನವರ ಅಣ್ಣ ಮಹಾದೇವಯ್ಯ ರವರು ನೀಡಿರುತ್ತಾರೆ. ಆ ಸಮಯದಲ್ಲಿ ದ್ಯಾವಯ್ಯ ಚಿಕ್ಕ ಹುಡುಗನಾಗಿದ್ದನು. ಅವರು ಶಾಲೆಗೆ ಹೋಗುತ್ತಿದ್ದರೋ ಇಲ್ಲವೋ ನನಗೆ ನೆನಪಿಲ್ಲ. ದ್ಯಾವಯ್ಯ ನವರು ಆ ಸಮಯ ದಲ್ಲಿ ಮತದಾನ ಮಾಡುತ್ತಿದ್ದರಾ ಎಂದರೆ ಸಾಕ್ಷಿ ಚಿಕ್ಕಹುಡುಗರು ಮತದಾನ ಮಾಡುವುದಿಲ್ಲ ಎಂದು ಹೇಳುತ್ತಾರೆ.

ಪಾರಿಕತ್ ನಲ್ಲಿ ಯಾರ್ಯಾರು ಸಹಿ ಮಾಡಿರುತ್ತಾರೆ ಮತ್ತು ಯಾರ್ಯಾರು ಹೆಬ್ಬೆಟ್ಟು ಹಾಕಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಪಾಲು ಪಾರಿಕತ್ ಗೆ ನಾನು ಸಹಿ ಮಾಡುವುದನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದರೆ ರೇವಣ್ಣ, ನಿಂಗಪ್ಪ, ಗುರುಬಸವಯ್ಯ ಸಹಿ ಮಾಡಿರುತ್ತಾರೆ. ಪಾಲು ಪಾರಿಕತ್ ನಲ್ಲಿ ಯಾರು ಹೆಬ್ಬೆಟ್ಟು ಹಾಕಿರುತ್ತಾರೋ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾರು ಹೆಬ್ಬೆಟ್ಟು ಹಾಕಿರುವುದಿಲ್ಲ. ನಾನು ದ್ಯಾವಯ್ಯ ನವರಿಗೆ ಅನುಕೂಲವಾಗಲಿ ಎಂದು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಪಾಲು ಪಾರಿಕತ್ ನ ಬಗ್ಗೆ ಮೇಲೆ ಹೇಳಿದ ಸಂಗತಿಗಳನ್ನು ನಮ್ಮ ವಕೀಲರಿಗೆ ಹೇಳಿ ಬರೆಯಿಸಿಲ್ಲ.

ಬೆಂಗಳೂರಯ್ಯ ನವರು ಯಾವಾಗ ತೀರಿಕೊಂಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ವಾದಿಗೆ ಅನಾನುಕೂಲವಾಗಲಿ ಎಂದು ನಾನು, ರವಿ ಮತ್ತು ದ್ಯಾವಯ್ಯ ರವರು ಸೇರಿಕೊಂಡು ಪಾಲು ಪಾರಿಕತ್ ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸುಳ್ಳು. ನಾನು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**